ಶುರುವಾಯಿತು. ಅವನು ಜನರಿಗೆ ಯಾವ ಮಾಹಿತಿಯನ್ನು ಕೊಡುತ್ತಿದ್ದನೋ ಅವುಗಳು ಪ್ರಾಡಕ್ಟ್ ಅನ್ನು ಖರೀದಿಸಿದವರಿಗೆ ಪರಿಣಾಮವನ್ನು ತೋರಿಸುತ್ತಿರಲಿಲ್ಲ. ಸ್ವತಃ ತಾನೇ ತನ್ನ ಹತ್ತಿರದ ನೆಂಟನೊಬ್ಬನಿಗೆ ಆ ಪ್ರಾಡಕ್ಟ್ ಅನ್ನು ಪರಿಚಯಿಸಿ ಅದನ್ನು ನಿರಂತರವಾಗಿ ಪಡೆದುಕೊಳ್ಳುವಂತೆ ಹೇಳುತ್ತಿದ್ದ. ಅವನು ಹರೀಶ್ ಹೇಳಿದಂತೆಯೇ ತೆಗೆದುಕೊಳ್ಳುತ್ತಿದ್ದ. ಆದರೆ ಪರಿಣಾಮವೇನೂ ಕಾಣಿಸಲಿಲ್ಲ. ಕಾಯಿಲೆ ಉಲ್ಬಣಿಸಿ ಅವನು ತೀರಿಕೊಂಡ. ಆಗಲೇ ಹರೀಶ್‌ಗೆ ತಾನು ಜನರಿಗೆ ಮೋಸ ಮಾಡುತ್ತಿರುವೆನೇನೋ ಅನಿಸಿತ್ತು. ಒಮ್ಮೆ ತಾನು ಮಾರಾಟ ಮಾಡಿದ ಪ್ರಾಡಕ್ಟ್ ಅನ್ನು ಮತ್ತೊಮ್ಮೆ ಕೇಳುವಾಗ ಹೆಚ್ಚಿನವರು ನಿರಾಕರಿಸುತ್ತಿದ್ದರು. ಇನ್ನು ಕೆಲವರು ಪಾಸಿಟಿವ್ ಮೈಂಡ್‌ನಿಂದ ತೆಗೆದುಕೊಳ್ಳುತ್ತಿದ್ದರು.

ಒಂದು ದಿನ ಅಚಾನಕ್ಕಾಗಿ ಅವನ ಗಿರಾಕಿಯೊಬ್ಬರಿಂದ ಮೊಬೈಲ್‌ಗೆ ಮೆಸೇಜ್ ಬಂತು. ಅದನ್ನು ನೋಡಿ ಹರೀಶ್‌ಗೆ ಆಘಾತವಾಯಿತು. ಅವನ ಪ್ರಾಡಕ್ಟ್ ಅನ್ನು ಉಪಯೋಗಿಸುತ್ತಿದ್ದ ವ್ಯಕ್ತಿಯೊಬ್ಬರಿಗೆ ಆ ಪ್ರಾಡಕ್ಟ್‌ನ ಅಡ್ಡಪರಿಣಾಮದಿಂದ ಕಿಡ್ನಿ ಫೈಲ್ ಆಗಿ ಹೋಗಿಬಿಟ್ಟರೆನ್ನುವ ದುಃಖದ ವಾರ್ತೆ. ಆ ಮೆಸೇಜ್‌ಗೆ ಏನೆಂದು ಉತ್ತರಿಸುವುದು? ಅಸಹಾಯಕತೆಯಿಂದ ಮರುಗಿದ. ಕೊನೆಗೆ ಒಂದು ನಿರ್ಧಾರಕ್ಕೆ ಬಂದು ಅಣ್ಣನಿಗೆ ಹೇಳಿ ಆ ವೆಲ್‌ನೆಸ್' ಕಂಪನಿಗೆ ಇತಿಶ್ರೀ ಹಾಡಿದ. ಹರೀಶ್ ಆ ಕಂಪನಿಯನ್ನು ಬಿಟ್ಟರೂ ಅವನು ಪ್ರಾಡಕ್ಟ್‌ಗಳನ್ನು ಮಾರಾಟ ಮಾಡಿದ್ದ ಕೆಲವು ಗಿರಾಕಿಗಳು ಅವನ ಸಂಪರ್ಕದಲ್ಲಿದ್ದರು. ಹೆಚ್ಚಿನವರು ಅವನ ಬಳಿ ದೂರು ಹೇಳುತ್ತಿದ್ದರು. ಅವನು ತಾನೀಗ ಆ ಕಂಪನಿಯನ್ನು ಬಿಟ್ಟಿರುವುದಾಗಿ ಹೇಳಿದರೂ ಪದೇ ಪದೇ ಫೋನ್ ಮಾಡಿಯೋ ಮೆಸೇಜ್ ಹಾಕಿಯೋ ದೂರುಗಳನ್ನು ತಿಳಿಸುತ್ತಿದ್ದರು. ಹಾಗೆ ಮೆಸೇಜ್ ಮಾಡುತ್ತಿದ್ದವರಲ್ಲಿ ಕಿಡ್ನಿ ಫೈಲ್ ಆಗಿ ಸತ್ತ ವ್ಯಕ್ತಿಯ ಹೆಂಡತಿ, ಆ ಪ್ರಾಡಕ್ಟ್ ಅನ್ನು ಉಪಯೋಗಿಸಿ ತನ್ನ ಗಂಡ ಕಿಡ್ನಿ ಕಳೆದುಕೊಂಡನೆಂದೂ ಕಂಪನಿಯ ವತಿಯಿಂದ ಪರಿಹಾರ ತೆಗೆಸಿಕೊಡಬೇಕೆಂದು ದುಂಬಾಲು ಬಿದ್ದಳು. ಹರೀಶ್‌ನಿಗೆ ಬಿಸಿ ತುಪ್ಪ ಗಂಟಲಲ್ಲಿ ಸಿಕ್ಕಿಕೊಂಡ ಅನುಭವವಾಯಿತು. ಆದಷ್ಟು ಆಕೆಯ ಕಾಲ್ ಬಂದಾಗಲೆಲ್ಲಾ ಮ್ಯೂಟ್‌ಗೋ ಇಲ್ಲ, ಏರೊಪ್ಲೇನ್ ಮೋಡ್‌ಗೋ ಹಾಕಿಬಿಡುವ. ಅವಳು ಪಟ್ಟು ಬಿಡದ ಬೇತಾಳದಂತೆ ಹರೀಶ್‌ನ ಬೆನ್ನೇರಿ ಕುಳಿತಳು.

ಪ್ರಾಡಕ್ಟನ್ನು ತಲುಪಿಸಿದವನು ಅವನೆಂದು ಅದರಿಂದ ಪರಿಹಾರ ತೆಗೆಸಿಕೊಡಬೇಕೆಂದೂ ಜೊತೆಗೆ ತನ್ನ ಕೌಟುಂಬಿಕ ವಿಷಯಗಳನ್ನೆಲ್ಲಾ ಬರೆದು ತಿಳಿಸಿದ್ದಳು. ಆಗ ತಾನೆ ಕೆಲಸಕ್ಕೆ ಸೇರಿದ್ದ ಹರೀಶ್‌ನಿಗೆ ಏನು ಮಾಡುವುದೆಂದು ತೋಚದೆ ಸ್ವಲ್ಪ ಕೈ ಸಾಲವನ್ನಾದರೂ ತೆಗೆದುಕೊಂಡು ಕಂಪನಿಯಿಂದ ಬಂದ ಪರಿಹಾರವೆಂದು ಅದನ್ನು ಅವಳಿಗೆ ಕಳುಹಿಸಿಬಿಟ್ಟರೆ ತಾನು ಉಳಿದುಕೊಂಡೇನು ಎಂದುಕೊಂಡ. ಈಗಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಯಾರ ಬಳಿ ಸಾಲ ಕೇಳುವುದು? ಕೊನೆಗೆ ಅಣ್ಣ ಗಿರೀಶನ ಬಳಿಯೇ ಸಾಲ ಪಡೆದುಕೊಂಡವನು ಅವಳ ಫೋನ್‌ಗೆ `ಜೀಪೇ' ಮಾಡುವುದೆಂದು ನಿರ್ಧರಿಸಿದ. ತಕ್ಷಣವೇ ಅವನಿಗೆ ಯೋಚನೆಗಿಟ್ಟುಕೊಂಡಿತು. ಒಮ್ಮೆ ಮಾಡಿ ಮುಗಿಸಿದರೆ ಆಯಿತು. ಆದರೆ ಆಕೆ ತಾನು ಪರಿಹಾರ ಕೊಡಿಸಿದೆನೆಂದು ಮತ್ತೆ ಮತ್ತೆ ಬೇಡಿಕೆ ಇಟ್ಟರೆ? ಅದಕ್ಕಾಗಿಯೇ ಅವನು ಒಂದು ನಿರ್ಧಾರಕ್ಕೆ ಬಂದ. ಕಾಲೇಜ್‌ಗೆ ರಜೆ ಬರೆದು ಅವಳನ್ನು ಭೇಟಿ ಮಾಡಿ ಮುಖತಃ ಹಣವನ್ನು ಕೊಟ್ಟು ಬರುವುದೆಂದು ಹೊರಟ. ಅವಳ ವಿಳಾಸ ಹುಡುಕುವುದು ಕಷ್ಟವೇನಾಗಲಿಲ್ಲ. ಅವನು ನಿರಂತರ ಪ್ರಾಡಕ್ಟ್ ಅನ್ನು ಕಳುಹಿಸುತ್ತಿದ್ದ ವಿಳಾಸ ಅದು. ಹರೀಶ್ ಅವಳ ಮನೆಯನ್ನು ಹುಡುಕಿಕೊಂಡು ಹೋದಾಗ ಅವಳ ಮನೆಗೆ ಬೀಗ ಜಡಿದಿತ್ತು. ಅಲ್ಲಿಯವರೆಗೆ ಹೋಗಿಯೂ ಏನೂ ಉಪಯೋಗವಾಗಲಿಲ್ಲ ಎಂದುಕೊಳ್ಳುತ್ತಿರುವಾಗಲೇ ಅವಳು ಸ್ಕೂಟರ್ ಪಾರ್ಕ್ ಮಾಡಿ ಬಾಗಿಲು ತೆರೆದಳು. ಹರೀಶ್ ತನ್ನ ಪರಿಚಯ ಮಾಡಿಕೊಂಡ. ಜೊತೆಗೆ ತಾನು ಬಂದ ಉದ್ದೇಶವನ್ನೂ ಹೇಳಿದ. ಅವಳು ಆತ್ಮೀಯತೆಯಿಂದ ಅವನನ್ನು ಒಳಗೆ ಕರೆದು ಕುಳ್ಳಿರಿಸಿ, ಒಳಗಿನಿಂದ ಉಳಿದ ಪ್ರಾಡಕ್ಟ್‌ಗಳನ್ನು ತಂದು ಅವನ ಮುಂದೆ ಇಟ್ಟು, 'ಇವು ಪ್ರಯೋಜನವಿಲ್ಲ. ಇವರು ಹೋಗಿಬಿಟ್ರು. ಏನು ಮಾಡುವಿರೋ ಮಾಡಿ' ಎಂದು ಗೋಡೆಗೆ ಒರಗಿ ನಿಂತಳು. ಮುಖದಲ್ಲಿ ದುಃಖದ ಛಾಯೆ ಇದ್ದರೂ ಅದನ್ನು ತೋರಿಸಿಕೊಂಡಂತಿರಲಿಲ್ಲ. ಹರೀಶ್‌ನಿಗೆ ಉಸಿರುಕಟ್ಟಿದಂತಾಯಿತು. ಊರಿಗೆ ಮರಳಿದ ಕೂಡಲೇ ಅಣ್ಣನಿಗೆ ಆ ವ್ಯವಹಾರವನ್ನು ನಿಲ್ಲಿಸುವಂತೆ ಹೇಳಬೇಕೆಂದುಕೊಂಡವನು ಉಗುಳು ನುಂಗಿಕೊಂಡ.

'ಮೇಡಂ, ನಿಮ್ಮ ವಿಷಯ ಕೇಳಿ ತುಂಬಾ ದುಃಖವಾಗ್ತಿದೆ. ಅದೆಷ್ಟೋ ಜನರಿಗೆ ಕಾಯಿಲೆ ವಾಸಿಯಾಗಿತ್ತು. ನಿಮ್ಮವರಿಗೂ ವಾಸಿಯಾಗ್ಬೇಕಿತ್ತು' ಎಂದ ಗದ್ಗದಿತನಾಗಿ.

'ಅದೆಲ್ಲಾ ಹಣೆಬರಹ ಅಂತಾರಲ್ಲ ಹಾಗೆ. ಇರಲಿ ಬಿಡಿ. ಅವರದ್ದೂ ನಾಲ್ಕನೆ ಹಂತಕ್ಕೆ ಬಂದಿತ್ತು. ಆದ್ರೆ ಇಷ್ಟು ಬೇಗನೆ ಹೊರಟು ಹೋಗ್ತಾರೆ ಅಂದುಕೊಂಡಿರಲಿಲ್ಲ ನಾನು' ಎಂದಳು ಆಕೆ.

'ಸದ್ಯ ಕಂಪನಿಯಿಂದ ಪರಿಹಾರಕ್ಕೆ ಬರೆದು ಹಾಕಿದೆ. ಒಂದು ಸ್ವಲ್ಪ ಹಣ ಬಂದಿದೆ. ಅದನ್ನು ನಾನೇ ಖುದ್ದಾಗಿ ಕೊಟ್ಟು ಹೋಗೋಣಾಂತ ಬಂದೆ' ಎಂದು ಜೇಬಿನಿಂದ ಹಣದ ಕಂತೆಯೊಂದನ್ನು ತೆಗೆದು ಅವಳ ಕೈಗಿತ್ತ. ಅವಳು ನಿರಾಕರಿಸಲಿಲ್ಲ. ಎಂಜಿನಿಯರಿಂಗ್ ಓದುತ್ತಿರುವ ತನ್ನ ಮಗಳ ವಿದ್ಯಾಭ್ಯಾಸಕ್ಕೆ ಬೇಕೆಂದು ಅದನ್ನು ಸಂತೋಷದಿಂದಲೇ ತೆಗೆದುಕೊಂಡು ಧನ್ಯತೆಯನ್ನು ಸೂಚಿಸಿದ್ದಳು. ಎಲ್ಲವನ್ನೂ ನೆನಪಿಸಿಕೊಂಡ ಹರೀಶ್ ಅವಳ ಮುಖವನ್ನೊಮ್ಮೆ ನೋಡಿದ. ಹೌದು ಆಕೆ ವಿಚಲಿತಳಾಗಲಿಲ್ಲ, ದುಃಖವನ್ನು ತೋರಿಸಿಕೊಳ್ಳಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಆಕೆ ಬದಲಾಗಿರಲಿಲ್ಲ.

ಹರೀಶ್ ಕಂಪನಿಯಿಂದ ಪರಿಹಾರದ ಮೊತ್ತವೆಂದು ಹಣವನ್ನು ಪದ್ಮಾಳ ಕೈಯಲ್ಲಿಟ್ಟು ಹೋದ ಮರುದಿವಸವೇ ಆ ವೆಲ್‌ನೆಸ್ ಕಂಪನಿಯ ಅವ್ಯವಹಾರಗಳ ಬಗ್ಗೆ ದೊಡ್ಡದೊಂದು ಲೇಖನ ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ಸಪ್ಲಿಮೆಂಟರಿ ಪ್ರಾಡಕ್ಟ್ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದೆಯೆಂದು ಆ ಕಂಪನಿಯ ಬಗ್ಗೆ ಯಾರೋ ದೂರಿತ್ತ ಪ್ರಕರಣದ ಲೇಖನ ಅದು. ಅದನ್ನು ಓದಿದ ಮೇಲೆ ಪದ್ಮಾಳಿಗೆ ಹರೀಶ್ ಹಾಗಾದರೆ ಅವನ ಕೈಯಿಂದಲೇ ಹಣ ಹಾಕಿ ಪರಿಹಾರವನ್ನು ತನಗೆ ನೀಡಿದನೇ? ಎನ್ನುವ ಗೊಂದಲವಾಯಿತು. ಆತ ಒಳ್ಳೆಯ ಸ್ಥಾನಮಾನದಲ್ಲಿರುವವನು, ತಾನು ಕರೆ ಮಾಡಿ ಬೆದರಿಸಿದಕ್ಕೆ ಆತ ತನ್ನ ಹಣವನ್ನೇ ಪರಿಹಾರವೆಂದು ಕೊಟ್ಟನೇ? ಅನುಮಾನ ಬಲವಾಯಿತು. ಅವನಿಗೆ ಫೋನ್ ಮಾಡಿ ವಿಷಯ ತಿಳಿದುಕೊಂಡಳು. ಆತ ಕೊನೆಗೆ ಸತ್ಯವನ್ನು ಒಪ್ಪಿಕೊಂಡ. ಈಗ ಆ ಕಂಪನಿಯ ಮೇಲೆ ಅದೆಷ್ಟೋ ಮಂದಿ ಕೇಸ್ ಹಾಕಿರುವರೆಂದು ಗಲ್ಲಿ ಗಲ್ಲಿಗಳಲ್ಲಿದ್ದ ವೆಲ್‌ನೆಸ್ ಸೆಂಟರ್‌ಗಳ ಮೇಲೆ ದಾಳಿ ಮಾಡಿರುವರೆಂದು ತಿಳಿಯಿತು. ಈ ಮೊದಲೇ ಹರೀಶ್ ಅಣ್ಣ ಗಿರೀಶನಿಗೂ

